ಜಗಳ ಮುಗಿಯಿತು ಎನ್ನುವುದರೊಳಗೆ ದೇವಪ್ಪ ಮತ್ತು ಮಾಯಕ್ಕನ ನಡುವೆ ಜಗಳ ಹುಟ್ಟಿಕೊಂಡಿದ್ದನ್ನು ಶಿವಪುತ್ರಪ್ಪ ಬಲ್ಲ. ಹಾಗೆಯೇ ಮಾಯಕ್ಕ ಶಿವಣ್ಣರ ನಡುವಿನ ಸ್ನೇಹದ ಬಗ್ಗೆಯೂ ಅವನಿಗೆ ಗೊತ್ತು. ದೇವಪ್ಪ ನೆಲೆ ನಿಲ್ಲಲು, ಹೊಲಮನೆ ಕೊಂಡುಕೊಳ್ಳಲು, ಹಸೆಮಣೆ ಏರಲು ಶಿವಪುತ್ರ ಕಾಕಾನೇ ಕಾರಣನಾಗಿದ್ದ. ಅದೆಲ್ಲ ಖರೆ, ಹೌದು. ಆದರೆ ದೇವಪ್ಪನಿಗೆ ಅದೆಲ್ಲ ನೆನಪಿದೆಯೆ? ಅವನ ಮಾತನ್ನು ದೇವಪ್ಪ ಮೀರಲಾರನೆ? ಹಿಂದಿನ ಮಾತು ಹಿಂದಕ್ಕೆ, ಇಂದಿನ ಮಾತು ಇಂದಿಗೆ ಎಂದು ಅಕಸ್ಮಾತ್ ಮೀರಿದರೆ?

***

ದೇವಪ್ಪನಿಗೆ ಕನ್ಯೆ ಹುಡುಕಲೆಂದು ದುಂಡಪ್ಪಕಾಕಾ ಬೇಸಿಗೆಯಲ್ಲಿ ಅಡ್ಡಾಡದ ಊರುಕೇರಿಗಳಿಲ್ಲ, ಮಳೆಗಾಲದಲ್ಲಿ ದಾಟದ ಹೊಳೆಹಳ್ಳಗಳಿಲ್ಲ ಎನ್ನುವ ಮಾತಿತ್ತು. ಆತ ಆಡಾಡ್ತಾ ಸವೆಸಿರುವ ದಾರಿಯನ್ನು ದಿನವೂ ಅಡ್ಡಾಡುವ ಬಸ್ಸುಲಾರಿಗಳೂ ಸವೆಸಿಲ್ಲ ಎಂಬುದು ಸುಳ್ಳಲ್ಲ. ದುಂಡಪ್ಪ ಬರೀ ದೇವಪ್ಪನಿಗೆ ಮಾತ್ರ ಕನ್ಯೆಗಳನ್ನು ಹುಡುಕಾಡುತ್ತಿರಲಿಲ್ಲ. ಒಂದು ಕೆಲಸಕ್ಕೆಂದು ಹೋದಾಗ ಇನ್ನೂ ಮೂರ್ನಾಲ್ಕು ಕೆಲಸಗಳನ್ನು ಮಾಡಿಕೊಂಡು ಬರುವುದು ಅವನಿಗೆ ಕರಗತವಾಗಿತ್ತು. ದೇವಪ್ಪನಿಗೆ ಹುಡುಕುವ ವೇಳೆಯಲ್ಲಿ ಅವನ ನಜರಿನಲ್ಲಿರುವ ಇನ್ನೂ ಮೂರ್ನಾಲ್ಕು ವರಕನ್ಯೆಯರಿಗೆ ಸೂಕ್ತ ಸಂಗಾತಿಗಳ ಹುಡುಕಾಟವನ್ನೂ ನಡೆಸಿ ಮರುದಿನ ಅವರ ಕೆಲಸಕ್ಕೆ ನಡೆಯುತ್ತಿದ್ದ. ಹೀಗಾಗಿ ವರ್ಷದ ಮೂನ್ನೂರು ಅರವತ್ತೈದು ದಿನಗಳಲ್ಲಿ ಮೂನ್ನೂರಾ ಹತ್ತು ದಿನಗಳನ್ನು ಆತ ಹೀಗೆ ಸೂಕ್ತ ವಧುವರರ ಹುಡುಕಾಟ, ವಿವಾಹ ನಿಶ್ಚಯ, ಹಿರೇತನ, ಅಣ್ಣತಮ್ಮಂದಿರ ಜಗಳ ಬಗೆಹರಿಸಿ ಅವರ ಆಸ್ತಿ ಪಾಲು ಮಾಡುವುದು, ಹೊಲ ಮನೆಗಳ ಆಸ್ತಿ ನೋಂದಣಿ ಇತ್ಯಾದಿ ಕೆಲಸಗಳಲ್ಲಿ ತೊಡಗಿಕೊಂಡಿರುತ್ತಿದ್ದ.

ಊರಲ್ಲಿ ಅನೇಕ ಯುವಕ ಯುವತಿಯರ ಮದುವೆಗೆ ದುಂಡಪ್ಪಕಾಕಾನ ಮಧ್ಯಸ್ಥಿಕೆಯೆ ಕಾರಣವಾಗಿತ್ತು. ಹಾಗಾಗಿ ದುಂಡಪ್ಪಕಾಕಾನ ಮಾತನ್ನು ಯಾರೂ ಅಷ್ಟು ಸರಳವಾಗಿ ತೆಗೆದುಹಾಕುತ್ತಿರಲಿಲ್ಲ. ಹುಡುಗ ಹುಡುಗಿಗೆ ಇಷ್ಟವಾಗಿರುವನೋ, ಇಲ್ಲವೋ ದುಂಡಪ್ಪಕಾಕಾನಿಗೆ ಇಷ್ಟವಾದರೆ ಸಾಕಿತ್ತು! ಇದರಿಂದಾಗಿ ಅನೇಕರು ತಮ್ಮ ಹುಡುಗ ಹುಡುಗಿಯರು ದುಂಡಪ್ಪನ ಕಣ್ಣಿಗೆ ಮತ್ತೆ ಮತ್ತೆ ಬೀಳಲಿ ಎಂದು ಅವನನ್ನು ಆಗಾಗ ಮನೆಗೆ ಕರೆಯುವುದು, ಬಿಸಿಬಿಸಿ ಉಪ್ಪಿಟ್ಟು ಚಹಾದೊಡನೆ ಸಮಾರಾಧನೆಮಾಡುವುದು ಇರುತ್ತಿತ್ತು. ಹಾಗೆಯೆ ಹುಡುಗನಿಗೆ ಹುಡುಗಿ ಇಷ್ಟವಾಗಿರದಿದ್ದರೂ 'ಏಯ್ ತಮ್ಮಾ, ನಿನಗೇನು ತಿಳಿತೈತಿ? ಹೀಂಗ ಜೀವನ ಹಾಳು ಮಾಡಿಕೊಳ್ಳಾಂವ ಅದಿಯೇನು? ಸುಮ್ಮನ ನಾವೆಲ್ಲ ಹಿರಿಯರು ಏನು ಹೇಳ್ತೀವಿ, ಅದನ್ನ ಕೇಳು. ಹಂಗೆ ಬಿಟ್ಟಕೋಂತ ಹೋದ್ರ ಹೆಣ್ಣು ಎಲ್ಲಿ ಅದಾವು? ನೋಡುನೋಡೂದರೊಳಗ ಜೀವನ ಮುಗಿತೈತಿ ನೋಡು' ಎನ್ನುತ್ತ ಅವರನ್ನು ಒಮ್ಮೊಮ್ಮೆ ಪುಸಲಾಯಿಸುತ್ತ, ಒಮ್ಮೊಮ್ಮೆ ಅವರಿಗೆ ಜಬರಿಸುತ್ತ ಮದುವೆಯ ಮಂಟಪಕ್ಕೆ ಕರೆತರುತ್ತಿದ್ದ. ಮದುವೆ ಯಶಸ್ವಿಯಾಗದ ಹುಡುಗನೋ ಹುಡುಗಿಯೋ ಇವನಿಗೆ ಹಿಡಿಶಾಪ ಹಾಕಿದಾಗ 'ಅಂವಗ ಸರಿಯಾಗಿ ಜೀವನ ಮಾಡಾಕ ಬರದಿದ್ರ ನಾಯೇನು ಮಾಡ್ಲಿ? ಯಬರೇಶಿಗಳು, ಊರ ಯಬರೇಶಿಗಳು' ಎಂದು ಅವರನ್ನೆ ಬೈಯುತ್ತಿದ್ದ.

ದೇವಪ್ಪ ಮತ್ತು ಅನಸವ್ವಳ ಮದುವೆಯನ್ನು ಅವನೆ ಮಾಡಿದ್ದು ತಾನೆ? ದೇವಪ್ಪನ ಪಾಲಿಗೆ ಅವನು ದೇವರಾದರೆ, ಅನಸವ್ವಳ ಪಾಲಿಗೆ ಅವನು ದೆವ್ವವಾಗಿದ್ದ. ದುಂಡಪ್ಪಕಾಕಾ ಮತ್ತು ಶಿವಪುತ್ರಕಾಕಾರನ್ನು ತನ್ನ ಜೀವಮಾನವಿಡೀ ಶಾಪ ಹಾಕುವುದಾಗಿ ಅನಸವ್ವ ಒಮ್ಮೆ ತುಂಬಿದ ಸಭೆಯಲ್ಲಿ ಹೇಳಿದಳು. 'ದೇವಪ್ಪ ನನಗ ಚೂರೂ ಇಷ್ಟ ಇರಲಿಲ್ಲ. ಈ ಯಜಮಾನ ಬಂದು ಅಂವನ್ನ ನನ್ನ ತಲೆಗೆ ಕಟ್ಟಿದ.' ಆಕೆ ಎಲ್ಲರೆದುರಿಗೆ ಹೇಳಿದ್ದೇ ಹೇಳಿದ್ದು. ಇಂತಹ ಮಾತುಗಳಿಗೆ ದುಂಡಪ್ಪ ಉತ್ತರ ಕೊಡಲಾರನೆ? 'ಗಂಡ ಚುಲೊ ಇಲ್ಲಂತ ಹೇಳಿಕೊಳ್ತಾ ಆಕಿ ಎರಡು ಮಕ್ಕಳನ್ನು ಹಡೆದಳು. ಮೊದಮೊದಲು ಅಂವ ಚುಲೋ ಅನಿಸಿತಿದ್ದ. ಈಗ್ಯಾಕ ಅನಿಸವಲ್ರ?' ಅವನ ಬಾಯಿಗೆ ಏನು ಹತ್ತುವುದೆಂದು ಆಕೆ ಸುಮ್ಮನಾಗುತ್ತಿದ್ದಳು. 'ದೇವಪ್ಪನಗಿಂತ ದುಂಡಪ್ಪನ ಬಾಯಿ ಹೊಲಸು. ಬಾಳ ಕೆಟ್ಟ ಮಾತಾಡ್ತಾನು ಅಂವ.' ದುಂಡಪ್ಪ ಎಲ್ಲ ದಾರಿಗಳನ್ನೂ ಬಳಸಿಕೊಳ್ಳುತ್ತಿದ್ದ. ಸುಳ್ಳು ಹೇಳದಿದ್ದರೆ ದೇವಪ್ಪನ ಮದುವೆಯೆ ಆಗುತ್ತಿರಲಿಲ್ಲವೆಂದು ಎಲ್ಲರೂ ಹೇಳುತ್ತಾರೆ.

ಯಾವುದೋ ಬಸ್ಸು ಹಿಡಿದು, ಇನ್ಯಾವುದೋ ಟೆಂಪೊ ಹಿಡಿದು, ಒಮ್ಮೊಮ್ಮೆ ಟ್ರಕ್ಕು, ಟ್ರ್ಯಾಕ್ಟರ್‌ಗಳಲ್ಲಿ ಪ್ರಯಾಣ ಮಾಡಿ ದೇವಪ್ಪನಿಗಾಗಿ ಹುಡುಗಿ ಹುಡುಕಿದ. ವಿನಮ್ರತೆ, ಕೋರಿಕೆ, ಒತ್ತಾಯಗಳೆಲ್ಲ ಅವನ ಮಾತಿನಲ್ಲಿ ಹೊಸ ರೂಪು ತಳೆಯುತ್ತಿದ್ದವು. ಹಗಲುರಾತ್ರಿಯೆನ್ನದೆ, ಬಿಸಿಲು ಬೇಗೆಯೆನ್ನದೆ, ಚಳಿಮಳೆಯೆನ್ನದೆ ದೇವಪ್ಪನನ್ನು ಬೆನ್ನಿಗೆ ಅಂಟಿಸಿಕೊಂಡು ಅಲೆದಾಡಿದ. ಯಾರಾದರೂ ಆ ಊರು ಎಂದು ಹೇಳಿದರೆ ಅಲ್ಲಿಗೆ ಹೋಗುತ್ತಿದ್ದ. ಈ ಊರು ಎಂದರೆ ಇಲ್ಲಿಗೆ ಹೊರಡುತ್ತಿದ್ದ. ದೇವಪ್ಪನಿಗೆ ಮದುವೆಯಾಗುವುದಂತೂ ಬಹಳ ಕಷ್ಟ, ಅದು ನೂರಕ್ಕೆ ಪ್ರತಿಶತ ಒಂದರಷ್ಟು ಮಾತ್ರ ಸಂಭವವೆಂದು ಗಿಳಿಶಾಸ್ತ್ರದವನು ಹೇಳಿದ್ದ. ಗಿಳಿಶಾಸ್ತ್ರದ ಗಿರಿಯಪ್ಪ ಸಿಂದೋಗಿಯಲ್ಲಿ ಗಿಳಿ ಗಿರಿಯಪ್ಪನೆಂದೇ ಹೆಸರಾಗಿದ್ದ. ಅವನು ಈ ಊರಿಗೆ ಬಂದಾಗಲೆಲ್ಲ ಶಿವವ್ವನ ಮನೆಗೆ ಬಂದೇ ಬರುತ್ತಿದ್ದ. ಗಿರೆಪ್ಪ ಬಂದಿದ್ದಾನೆಂದರೆ ಸಾಕು, ಶಿವವ್ವ ತನ್ನ ಮಗ ದೇವಪ್ಪನ ಶಕುನ ತಿಳಿಯಲು ಅವನನ್ನು ದುಂಬಾಲು ಬಿದ್ದು ಕರೆಸುತ್ತಿದ್ದಳು. ಬರೀ ದೇವಪ್ಪನ ಶಕುನ ತಿಳಿಯುವುದಷ್ಟೇ ಅಲ್ಲ, ಇಡೀ ಮನೆಮಂದಿಯ ಗ್ರಹಗತಿ ಹೇಗಿದೆಯೆಂದು ತಿಳಿಯುವ ಉತ್ಸುಕತೆ ಅವಳಿಗೆ. ಗಿಳಿ ಗಿರಿಯಪ್ಪ ಅಥವಾ ಗಿಣಿಮೂಗಿನ ಗಿರಿಯಪ್ಪ ಎಂದೇ ಅವನು ಫೇಮಸ್ಸು. ಅವನೊಡನಿರುವ ಗಿಣಿಯಂತೆ ಅವನಿಗೂ ಚೆಂದಾದ ಗಿಣಿಮೂಗು ಇದ್ದುದರಿಂದ ಅವನು ಹೇಳುವ ಭವಿಷ್ಯ ಬಹಳ ಮಹತ್ವದ್ದೆಂದು ಮಂದಿ ನಂಬಿಕೊಂಡಿದ್ದರು. ಅವನ ಹೆಂಡತಿ ರಾತ್ರಿ ಎಂದಾದರೂ ಗಂಡನ ಗಿಣಿಮೂಗನ್ನು ಕಚ್ಚಿದ್ದಾಳೆಯೆ ಎಂದು ಕೆಲವು ಉಡಾಳ ಹುಡುಗರು ಒಂದು ಸಲ ಕೇಳಿ ಶಿವವ್ವನಿಂದ ಬೈಸಿಕೊಂಡಿದ್ದರು. ಕಚ್ಚಿಸಿ ಕಚ್ಚಿಸಿಕೊಂಡೇ ಅವನ ಮೂಗು ಗಿಣಿಮೂಗಿಗೆ ತಿರುಗಿದೆಯೆಂದು ಇನ್ನೊಬ್ಬ ಹೇಳಿದಾಗ ಅಲ್ಲಿದ್ದವರು, ಗಿಳಿಶಾಸ್ತ್ರದವನು ಮತ್ತು ಮುದುಕಿ ಎಲ್ಲರೂ ಸೇರಿಕೊಂಡೇ ನಗತೊಡಗಿದ್ದರು.

ಗಿಣಿಮೂಗಿನ ಗಿರಿಯಪ್ಪ ವರ್ಷಕ್ಕೆ ಎರಡುಮೂರು ಸಲವಾದರೂ ದೇವಪ್ಪನ ಖುದ್ದೂರು ಸಿಂದೋಗಿಗೆ ಬರುತ್ತಿದ್ದ. ಊರ ಜಾತ್ರೆಯಲ್ಲಿಯಂತೂ ಅವನ ಠಿಕಾಣಿ ಇದ್ದೇ ಇರುವುದು. ಅವನ ಗಿಳಿಯಾದರೂ ಎಷ್ಟೊಂದು ಅಂದವಾಗಿತ್ತು. ಅದರ ಹಸಿರು ಬಣ್ಣವಂತೂ ನಯನ ಮನೋಹರವಾದುದು! ಅದರ ಹಸಿರು ತಮ್ಮ ಸೀರೆಯ ಮೈಯಿಗೆ, ಅದರ ಎದೆಯ ಹತ್ತಿರಿರುವ ರೋಮಾಂಚಕಾರಿ ನೀಲಿ ಬಣ್ಣ ತಮ್ಮ ಸೀರೆಯ ಸೆರಗಿಗೆ ಮತ್ತು ಅದರ ಕೊಕ್ಕಿನ ಕೆಂಪು ತಮ್ಮ ತುಟಿಗೆ ಇದ್ದಿದ್ದರೆ ತಮ್ಮ ಸೌಂದರ್ಯದ ಮುಂದೆ ಯಾರಿರುತ್ತಿದ್ದರೆಂದು ಕೆಲವು ತರುಣಿಯರು ಕನಸು ಕಾಣುತ್ತಿದ್ದರು. ಹಾಗೆ ಯೋಚಿಸಿದಾಗಲೆಲ್ಲ ಅವರ ಹೃದಯದ ಕಂಪನ ಹೆಚ್ಚಾಗುತ್ತಿತ್ತು. ತಮ್ಮ ಭವಿಷ್ಯವನ್ನು ಆ ಹಸಿರು ಗಿಳಿ ಸರಿಯಾಗಿ ಹೇಳಿದರೂ ಸರಿ, ಹೇಳದಿದ್ದರೂ ಸರಿ! ಅದನ್ನು ಕಣ್ತುಂಬಿಕೊಳ್ಳುವ ಭಾಗ್ಯ ಇದೆಯಲ್ಲ, ಅದೇ ದೊಡ್ಡದೆಂದು ಅದನ್ನು ನೋಡಲು ಮುಕರುವವರ ಸಂಖ್ಯೆ ದೊಡ್ಡದಿರುತ್ತಿತ್ತು. ಪ್ರತಿವರ್ಷ ಜಾತ್ರೆಯಲ್ಲಿ ಅವನ ಹತ್ತಿರ ಹೋಗಿ ಬಂದಾಗಲೇ ಆ ವರ್ಷದ ಜಾತ್ರೆ ಪೂರ್ತಿಯಾದಂತೆ. ತಮ್ಮ ಭವಿಷ್ಯದಲ್ಲಿ ಏನಿದೆಯೆಂದು ತಿಳಿಯುವ ಕುತೂಹಲವಂತೂ ಎಲ್ಲರಿಗೂ ಇರುತ್ತಿತ್ತು. ಜೀವನದ ರಹಸ್ಯವನ್ನು ತಿಳಿಯಲು ಎಲ್ಲರೂ ಬಹಳ ಉತ್ಸುಕರಾಗಿರುತ್ತಿದ್ದರು.

ಜಾತ್ರೆ, ಸಂತೆಯಲ್ಲಿ ಭವಿಷ್ಯ ಕೇಳುವುದು ಅಪಾಯಕ್ಕೆ ಆಹ್ವಾನ ಕೊಟ್ಟಂತೆ ಎಂದು ಎಲ್ಲರಿಗೂ ಗೊತ್ತು. ಎಲ್ಲರೆದುರು ತಮ್ಮ ರಹಸ್ಯ ಗೊತ್ತಾಗಿಬಿಟ್ಟರೆ? ಅದಕ್ಕಾಗಿ ಎಲ್ಲರೂ ತಮ್ಮೊಬ್ಬರಿಗೆ ಕೇಳುವಂತೆ ಹೇಳು ಎಂದು ಅವನಿಗೆ ಸಂಜ್ಞೆ ಕೊಡುತ್ತಿದ್ದರು. ಅವನು ಅವರ ಕಿವಿಯಲ್ಲಿ ಏನೇನೋ ಹೇಳುವನು. ಇವರಿಗೆ ಅರ್ಥ ತಿಳಿದರೂ ಆಯಿತು, ತಿಳಿಯದಿದ್ದರೂ ಆಯಿತು. ಹೂಂ ಅನ್ನಬೇಕಾಗುತ್ತಿತ್ತು. ಶಿವವ್ವನಿಗಂತೂ ಗಿರಿಯಪ್ಪನ ಮೇಲೆ ಎಲ್ಲಿಲ್ಲದ ಭಕ್ತಿ. ಗಿರಿಯಲ್ಲಿರುವ ಗಿರೀಶನೆ ಗಿಳಿಯ ಗಿರಿಯಪ್ಪನಾಗಿ ಬರುತ್ತಾನೆಂದು ಆಕೆ ನಂಬಿ ತುಂಬ ಶ್ರದ್ಧೆಯಿಂದ ನಡೆದುಕೊಳ್ಳುತ್ತಿದ್ದಳು. ಬರೀ ನಡೆದುಕೊಳ್ಳುತ್ತಿದ್ದಳಷ್ಟೇ ಅಲ್ಲ, ತಮ್ಮ ಮನೆಯ ಪ್ರತಿಯೊಂದು ವ್ಯವಹಾರ, ಆಗು ಹೋಗುಗಳನ್ನು

